ಈ) ಅಕಾಲಿಕವಾಗಿ ಬಿಡುಗಡೆಯಾಗುವ ಬಂದಿಗಳಿಗೆ, ಕರ್ನಾಟಕ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್, ಡಿ.ದೇವರಾಜ ಅರಸ್ ಬ್ಯಾಕ್‌ವರ್ಡ್ ಕ್ಲಾಸಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ಮತ್ತು ಡಾ: ಬಿ.ಆರ್. ಅಂಬೇಡ್ಕರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಲಿಮಿಟೆಡ್ ರವರಿಂದ ಅತೀ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸಿ ಕಾರಾಗೃಹದಲ್ಲಿ ಪಡೆದ ವೃತ್ತಿ ತರಬೇತಿಯನ್ನು ಸದುಪಯೋಗಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ರೈತರ ವಿದೇಶ ಪ್ರವಾಸ

504 (762) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ರಾಜ್ಯದ ಎಷ್ಟು ಜನ ರೈತರನ್ನು ಅಧ್ಯಯನ ಪ್ರವಾಸಕ್ಕಾಗಿ ಯಾವ್ಯಾವ ದೇಶಗಳಿಗೆ ಸರ್ಕಾರದ ವತಿಯಿಂದ ಕಳುಹಿಸಲಾಗಿತ್ತು; ಇದಕ್ಕಾಗಿ ಸರ್ಕಾರಕ್ಕೆ ತಗುಲಿದ ವೆಚ್ಚವೆಷ್ಟು (ಪೂರ್ಣ ವಿವರವನ್ನು ಒದಗಿಸುವುದು);

ಆ) ಈ ವಿದೇಶಿ ಪ್ರವಾಸದಿಂದ ಕೃಷಿ ಕ್ಷೇತ್ರಕ್ಕೆ/ ರೈತರಿಗೆ ಯಾವ ರೀತಿ ಅನುಕೂಲವಾಗಿದೆ;

ಇ) ಪ್ರಸಕ್ತ ಸಾಲಿನಲ್ಲಿಯೂ ಸಹ ರೈತರನ್ನು ವಿದೇಶಕ್ಕೆ ಕಳುಹಿಸುವ ಕಾರ್ಯಕ್ರಮ ಇದೆಯೇ; ಈ ಪ್ರವಾಸಕ್ಕೆ ರೈತರನ್ನು ಆಯ್ಕೆ ಮಾಡುವಾಗ ಪಾಲಿಸುವ ನಿಯಮಗಳೇನು;

ಈ) ಇಂತಹ ಸಮಯದಲ್ಲಿ ರೈತರನ್ನು ಆಯ್ಕೆ ಮಾಡುವಾಗ ಅತ್ಯಂತ ಹಿಂದುಳಿದ ಬೀದರ್ ಜಿಲ್ಲೆಯ ವಿಶೇಷವಾಗಿ ಭಾಲ್ಕಿ ಮತ್ತು ಕ್ಷೇತ್ರದ ರೈತರನ್ನು ಆಯ್ಕೆ ಮಾಡಲಾಗುವುದೇ?

ಶ್ರೀ ಎಸ್.ಎ. ರವಿಂದ್ರನಾಥ್ (ಕೃಷಿ ಸಚಿವರು) :

ಅ) ಕಳೆದ ವರ್ಷ ರಾಜ್ಯದ 528 ಜನ ರೈತರನ್ನು ಅಧ್ಯಯನ ಪ್ರವಾಸಕ್ಕಾಗಿ ಚೀನಾ ದೇಶಕ್ಕೆ ಸರ್ಕಾರದ ವತಿಯಿಂದ ಕಳುಹಿಸಲಾಗಿತ್ತು. ಇದಕ್ಕಾಗಿ ಸರ್ಕಾರಕ್ಕೆ ತಗಲಿದ ವೆಚ್ಚ ರೂ. 3,58,77,600/–

ಆ) ರೈತರಿಗೆ ಚೀನಾ ದೇಶದಲ್ಲಿನ ಕೃಷಿ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸಲಾಗಿರುತ್ತದೆ. ಸದರಿ ತಾಂತ್ರಿಕತೆಗಳನ್ನು ತಮ್ಮ ಕ್ಷೇತ್ರಗಳಲ್ಲಿ ಅಳವಡಿಸಿ

ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿರುವುದರಿಂದ ರೈತರಿಗೆ ಈ ಪ್ರವಾಸ ದಿಂದ ಅನುಕೂಲವಾಗಿರುತ್ತದೆ.

ಇ) ಹೌದು.

ಪ್ರಸಕ್ತ ಸಾಲಿನಲ್ಲಿಯೂ ಸಹ ರೈತರನ್ನು ಚೀನಾ ದೇಶಕ್ಕೆ ಅಧ್ಯಯನ ಪ್ರವಾಸಕ್ಕೆ ಕಳುಹಿಸುವ ಕಾರ್ಯಕ್ರಮವಿದೆ. ಇದಲ್ಲದೆ ಇಸ್ರೇಲ್ ದೇಶಕ್ಕೆ ರೈತರನ್ನು ಅಧ್ಯಯನ ಪ್ರವಾಸಕ್ಕೆ ಕಳುಹಿಸುವ ಕಾರ್ಯಕ್ರಮ ಇದೆ.

ಈ ಪ್ರವಾಸಕ್ಕೆ ರೈತರನ್ನು ಆಯ್ಕೆ ಮಾಡುವಾಗ ಪಾಲಿಸುವ ನಿಯಮಗಳೇನೆಂದರೆ.

- ಸ್ವಂತ ಜಮೀನಿನಲ್ಲಿ ಸ್ವಯಂ ವ್ಯವಸಾಯ ಮಾಡುತ್ತಿರಬೇಕು.
- ಪ್ರಗತಿಪರ ರೈತರಾಗಿರಬೇಕು.
- ಓದಲು ಮತ್ತು ಬರೆಯಲು ಜ್ಞಾನ ಹೊಂದಿರಬೇಕು.
- ಕೃಷಿ ಪಂಡಿತ ಪ್ರಶಸ್ತಿ ಮತ್ತು ಕೃಷಿ ಪ್ರಶಸ್ತಿ ಪಡೆದ ರೈತರಿಗೆ ಆದ್ಯತೆ ನೀಡುವುದು.
- 20 ರಿಂದ 60 ವರ್ಷಗಳ ವಯೋಮಿತಿಯಲ್ಲಿದ್ದು, ಉತ್ತಮ ಆರೋಗ್ಯ ಹೊಂದಿರಬೇಕು.
- ಪ್ರತಿ ತಾಲ್ಲೂಕಿನಿಂದ ಮೂರು ಜನ ರೈತರನ್ನು ಆಯ್ಕೆ ಮಾಡಬೇಕು.
- ಸರ್ಕಾರದ ನಿಬಂಧನೆಯಂತೆ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವರ್ಗದ ರೈತರನ್ನು ಆಯ್ಕೆ ಮಾಡಬೇಕು. ನಿಬಂಧನೆಯಂತೆ ತಾಲ್ಲೂಕು ಮಟ್ಟ ದಲ್ಲಿ ಆರಿಸಲು ಸಾಧ್ಯವಾಗದೇ ಇದ್ದಲ್ಲಿ, ಜಿಲ್ಲಾ ಮಟ್ಟದಲ್ಲಿ ಯಾದರೂ ಮೇಲೆ ತಿಳಿಸಿದ ವರ್ಗದ ರೈತರುಗಳನ್ನು ಕನಿಷ್ಟ ಸಂಖ್ಯೆಯಲ್ಲಿ ಆಯ್ಕೆ ಮಾಡಬೇಕಾಗಿರುತ್ತದೆ.

ಈ) ಭಾಲ್ಕಿ ಮತ ಕ್ಷೇತ್ರದ ರೈತರನ್ನು ಸಹ ಆಯ್ಕೆ ಮಾಡಲಾಗುವುದು.